ತಲ್ಲೀನರಾಗಿದ್ದಾಗ ಮಕ್ಕಳು ಲಾಕರಿನ ಬಳಿ ಆಟವಾಡುತ್ತಿದ್ದರು. ಆಡ್ತಾ ಆಡ್ತಾ ದೊಡ್ಡವಳಾದ ಮೇ ತಂಗಿ ಅಗಾಥಳನ್ನು ಲಾಕರಿನೊಳಗೆ ನೂಕಿ ಹ್ಯಾಂಡಲನ್ನು ಎಳೆದು ಮಿಸ್ಟರ್ ಆಡಮ್ಸ್ ತೋರಿಸಿದಂತೆ ಕಾಂಬಿನೇಶನ್ ಲಾಕಿನ ಮೂರು ಕಡ್ಡಿಗಳ ತಿರುಗಣೆಯನ್ನು ತಿರುಗಿಸಿದಳು.

ಮಿಸ್ಟರ್ ಆಡಮ್ಸ್ ಗಾಬರಿಗೊಂಡು ಒಂದೇ ಹೆಜ್ಜೆಗೆ ಲಾಕರನ್ನು ಸಮೀಪಿಸಿ ಹ್ಯಾಂಡಲನ್ನು ಎಳೆದರು. ಏನೂ ಪ್ರಯೋಜನವಾಗಲಿಲ್ಲ... 'ಲಾಕರ್ ತೆರೆಯುವುದು ಸಾಧ್ಯವೇ ಇಲ್ಲ.' ಅವರ ಮುಖ ಕಪ್ಪಿಟ್ಟಿತು. 'ಕಾಂಬಿನೇಶನ್ ಲಾಕ್ ಮತ್ತು ಟೈಂ ಎರಡೂ ಸೆಟ್ ಮಾಡಿಲ್ಲ...' ಅವರ ದನಿ ಕಂಪಿಸುತ್ತಿತ್ತು. ಗಾಬರಿಯಿಂದ ಅವರ ಹಣೆಯ ಮೇಲೆ ಬೆವರ ಹನಿಗಳು ಮೂಡಲಾರಂಭಿಸಿದವು.

'ಓಹ್, ಗಾಡ್!' ಮಗುವಿನ ತಾಯಿ ಆಕ್ರಂದಿಸತೊಡಗಿದಳು.

'ಶ್ಶ್' ಮಿಸ್ಟರ್ ಆಡಮ್ಸ್ ನಡುಗುತ್ತಿರುವ ಕೈಯನ್ನು ಮೇಲೆತ್ತಿದರು. 'ಕೆಲವು ಸಮಯ ಸ್ವಲ್ಪ ಸುಮ್ಮನಿರಿ. ಅಗಾಥ? ನನ್ನ ಕಂದಾ?' ಅವರು ಲಾಕರಿನ ಬಾಗಿಲ ಬಳಿ ಬಾಯಿಟ್ಟು ಕೂಗಿದರು. ಒಳಗೆ ಎಲ್ಲೋ ಕತ್ತಲ ಗರ್ಭದಿಂದ ಮಗು ರೋದಿಸುತ್ತಿರುವ ಶಬ್ದ ಕೇಳಿಸಿತು.

'ನನ್ನ ಕಂದ ಹೆದರಿಕೆಯಿಂದಲೇ ಸಾಯುತ್ತಾಳೆ... ಡ್ಯಾಡೀ ಆ ಬಾಗಿಲನ್ನು ಒಡೆಸಿ ಬಿಡಿ... ಗಂಡಸರೇ, ನಿಮಗೇನೂ ತೋಚುತ್ತಿಲ್ಲವೆ? ಏನಾದ್ರೂ ಮಾಡಿ ನನ್ನ ಮಗುವನ್ನು ಉಳಿಸಿ... ಪ್ಲೀಜ್...'

'ಈ ಲಾಕರನ್ನು ತೆರೆಯಬಲ್ಲ ವ್ಯಕ್ತಿ ಲಿಟಲ್‌ರಾಕ್‌ನಲ್ಲಿದ್ದಾನೆ. ಅಲ್ಲೀವರೆಗೆ ಏನು ಮಾಡುವುದು ರಾಲ್ಫ್?' ಮಿಸ್ಟರ್ ಆಡಮ್ಸ್ ಕೂಡ ಕಂಗಾಲಾಗಿದ್ದರು. 'ಲಾಕರ್‌ನೊಳಗೆ ಮಗು ಎಷ್ಟು ಕಾಲ ಬದುಕಿರಬಲ್ಲುದು? ಅದರೊಳಗೆ ಹೇಗೂ ಗಾಳಿ ಇಲ್ಲ, ಅದು ಹೆದರಿಕೆಯಿಂದಲೇ ಸಾಯುವುದು ಖಂಡಿತ.'

ದುಃಖತಪ್ತಳಾಗಿದ್ದ ಅಗಾಥಾಳ ತಾಯಿ ಲಾಕರಿನ ಬಾಗಿಲು ಬಡಿಯತೊಡಗಿದಳು. ಯಾರೋ ಡೈನಾಮೆಟ್ ಇಟ್ಟು ಬಾಗಿಲನ್ನು ತೆರೆಯಲು ಸೂಚಿಸಿದರು. ಅನ್ನಾಬೆಲ್ಲಾಳ ಬಟ್ಟಲು ಕಂಗಳು ಜಿಮ್ಮಿಯ ಕಡೆಗೆ ತಿರುಗಿದವು. ಅವುಗಳಲ್ಲಿ ಆತಂಕ ಕಾಣುತ್ತಿರಲಿಲ್ಲ. ತನ್ನ ಭಾವೀ ಗಂಡ ಏನು ಬೇಕಾದರೂ ಮಾಡಬಲ್ಲ ಎಂಬ ನಂಬಿಕೆ ಅವುಗಳಲ್ಲಿ ಎದ್ದು ಕಾಣುತ್ತಿತ್ತು.

'ರಾಲ್ಫ್, ಏನನ್ನಾದರೂ ಮಾಡು ಡಾರ್ಲಿಂಗ್. ಪ್ರಯತ್ನ ಪಡು.'

ಜಿಮ್ಮಿ ಅವಳೆಡೆಗೆ ನೋಡಿದ. ಅವನ ತುಟಿಗಳ ಮೇಲೆ ಮಂದಹಾಸ ಮೂಡಿತು. ಕಣ್ಣುಗಳು ಮಿನುಗತೊಡಗಿದವು.

'ಡಿಯರ್, ನೀನು ಸಿಕ್ಕಿಸಿಕೊಂಡಿರುವ ಗುಲಾಬಿ ನನಗೆ ಕೊಡು.' ಅವನು ಹೇಳಿದ.

ಅವಳು ತನ್ನ ಟಾಪಿಗೆ ಸಿಕ್ಕಿಸಿದ್ದ ಗುಲಾಬಿಯನ್ನು ತೆಗೆದು ಅವನಿಗೆ ಕೊಟ್ಟಳು. ಜಿಮ್ಮಿ ತನ್ನ ಕೋಟನ್ನು ಕಳಚಿ ಶರ್ಟಿನ ಗುಂಡಿಗೆ ಗುಲಾಬಿಯನ್ನು ಸಿಗಿಸಿ, ತೋಳುಗಳನ್ನು ಮಡಚಿದ. ಆ ಕ್ಷಣದಿಂದ ರಾಲ್ಫ್ ಸ್ಪೆನ್ಸರ್ ತೀರಿಕೊಂಡು ಅವನ ಜಾಗದಲ್ಲಿ ಜಿಮ್ಮಿ ವ್ಯಾಲೆಂಟಿನ್ ಮತ್ತೆ ಜೀವತಳೆದ.

'ನೀವೆಲ್ಲಾ ಲಾಕರ್‌ನಿಂದ ದೂರ ಸರಿಯಿರಿ... ಬೇಗ!' ಅಧಿಕಾರಯುತ ದನಿಯಲ್ಲಿ ಅವನು ಹೇಳಿದ.

ಅವನು ಸೂಟ್ಕೇಸನ್ನೆತ್ತಿ ಮೇಜಿನ ಮೇಲಿರಿಸಿದ. ತೆರೆದು, ಅದರೊಳಗಿಂದ ಒಂದೊಂದೇ ಹತ್ಯಾರಗಳನ್ನು ಎತ್ತಿ ಮೇಜಿನ ಮೇಲೆ ಹರಡಿದ. ಆ ಗಳಿಗೆಯಿಂದ ಅವನು ಎಲ್ಲರ ಇರುವನ್ನು